APRIL 19, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **‘ವಿದ್ಯಾಸಿರಿ ಯೋಜನೆ’; ಅಲ್ಪ ಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗೆ, ಮಾಸಿಕ ಎರಡು ಸಾವಿರ ರೂಪಾಯಿ, ಶಿಷ್ಯ ವೇತನ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ ಅನು ್ಠಾನ; ಕರ್ನಾಟಕಕ್ಕೆ ಅಗ್ರ ಸ್ಥಾನ – ಎನ್.ಚಲುವರಾಯ ಸ್ವಾಮಿ.**
- **ವಿಶ್ವ ಪರಂಪರೆ ದಿನ; ಅಂತಾರಾಷ್ಟ್ರೀಯ ಸ್ಮಾರಕಗಳು ಮತ್ತು ಪರಿಸರ ತಾಣಗಳ, ಜನ ಜಾಗ್ರತಿ ದಿನಾಚರಣೆ.**
- **ಧಾರವಾಡದ, ಗೆಡ್ಡೆ–ಗೆಣಸು ಸಂಶೋಧನಾ ಕೇಂದ್ರದಿಂದ, ಮೌಲ್ಯವರ್ಧಿತ ಪೌಷ್ಟಿಕ ಆಹಾರ, ಶೀಘ್ರ ಮಾರುಕಟ್ಟೆಗೆ.**

<><><>

**ಈಗ ವಾರ್ತೆಗಳ ವಿವರ**

<><><>

**ಅಲ್ಪ ಸಂಖ್ಯಾತ ಸಮುದಾಯಗಳ, ಎಲ್ಲ ಮಕ್ಕಳು, ಉನ್ನತ ಶಿಕ್ಷಣ ಪಡೆಯಬೇಕು ಎಂಬ ಉದ್ದೇಶದಿಂದ, ‘ವಿದ್ಯಾಸಿರಿ ಯೋಜನೆ’ಯನ್ನು ಜಾರಿಗೆ ತರಲಾಗಿದೆ; ಪ್ರತಿ ವಿದ್ಯಾರ್ಥಿಗೆ ಎರಡು ಸಾವಿರ ರೂಪಾಯಿ ಶಿಷ್ಯವೇತನ ನೀಡಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬೆಂಗಳೂರಿನ ಕೆಂಗೇರಿಯಲ್ಲಿ, ನೂತನವಾಗಿ ನಿರ್ಮಿಸಿದ, ಕಲಿದೇವ ಸಮುದಾಯ ಭವನವನ್ನು ಲೋಕಾರ್ಪಣೆಗೊಳಿಸಿ, ಮಾತನಾಡಿದರು.**

<><><>

**ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮಾತನಾಡಿ, ಮಡಿವಾಳ ಸಮುದಾಯದ ಪ್ರಗತಿಗೆ ಸರ್ಕಾರ ಬದ್ಧವಾಗಿದೆ. ಬಸವಾದಿ ಶರಣರ ಜಾತಿಮುಕ್ತ ಮನು ್ಯ ಸಮಾಜ ನಿರ್ಮಾಣದ ಆಶಯದಂತೆ, ಸರ್ಕಾರ ನಡೆಯುತ್ತಿದೆ ಎಂದರು.**

<><><>

2024ರ ಹಿಂಗಾರಿ ಹಾಗೂ 2023–24ನೇ ಸಾಲಿನ ಮುಂಗಾರಿ ಬೆಳೆಗಳಿಗೆ, ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು, ಪರಿಣಾಮಕಾರಿಯಾಗಿ ಅನು  ಾನ ಮಾಡಿದ, ರಾಜ್ಯಗಳ ಪಟ್ಟಿಯಲ್ಲಿ, ಕರ್ನಾಟಕ ಅಗ್ರ ಸ್ಥಾನ ಪಡೆದಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಬೆಳೆ ವಿಮೆ ಅನು  ಾನದಲ್ಲಿ, ಅಗ್ರ 3 ಸ್ಥಾನದಲ್ಲಿರುವ ದೇಶದ ಮೂರು ಜಿಲ್ಲೆಗಳ ಪೈಕಿ, ರಾಜ್ಯದ ಹಾವೇರಿ ಮತ್ತು ಕೊಪ್ಪಳ ಸ್ಥಾನ ಪಡೆದಿರುವುದು, ಸಂತಸ ತಂದಿದೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಸಚಿವರು ಪ್ರಕಟಿಸಿದ್ದಾರೆ.

<><><>

ಗ್ರಾಮೀಣಾಭಿವೃದ್ಧಿ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ, 12 ಜನ ಅಧಿಕಾರಿಗಳನ್ನು ಒಳಗೊಂಡ, ಇ–ಸ್ವತ್ತು ಕಾರ್ಯನಿರ್ವಹಣಾ ಸಮಿತಿ ರಚಿಸಲಾಗಿದೆ ಎಂದು, ಪಂಚಾಯತ್‌ರಾಜ್ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿ ನಿಯಮ, 1993ರ ಪ್ರಕರಣ 199ಕ್ಕೆ ತರಲು ಉದ್ದೇಶಿಸಿರುವ, ತಿದ್ದುಪಡಿಗಳಿಗೆ ಅನುಗುಣವಾಗಿ, ಇ–ಸ್ವತ್ತಿಗೆ ಸಂಬಂಧಿಸಿ, ಗ್ರಾಮ ಪಂಚಾಯಿತಿಗಳಲ್ಲಿ ಉದ್ಭವಿಸುವ ಸಮಸ್ಯೆ ಹಾಗೂ ಇ–ಸ್ವತ್ತು ಸುಧಾರಣೆ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸುವ ಹೊಣೆ ಈ ಸಮಿತಿಗೆ ವಹಿಸಲಾಗಿದೆ, ಎಂದಿದ್ದಾರೆ.

<><><>

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಜಾತಿ ಜನ ಗಣತಿಯಲ್ಲಿ 1 ಕೋಟಿ 30 ಲಕ್ಷ ಕುಟುಂಬಗಳು, 5 ಕೋಟಿ 98 ಲಕ್ಷ ಜನ ಭಾಗವಹಿಸಿದ್ದಾರೆ. 1 ಲಕ್ಷ 33 ಸಾವಿರ ಸರ್ಕಾರಿ ನೌಕರರು, ಜನ ಗಣತಿಯಲ್ಲಿ ಪಾಲ್ಗೊಂಡಿದ್ದಾರೆ. 30 ಸಾವಿರ ಹಳ್ಳಿಗಳಲ್ಲಿ ಗಣತಿ ಮಾಡಿದ್ದಾರೆ. ನ್ಯೂನತೆಗಳಿರಬಹುದು ಆದರೆ ಅವೈಜ್ಞಾನಿಕ ಎನ್ನುವುದು ಸರಿಯಲ್ಲ ಎಂದು, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ, ಕೋಲಾರದಲ್ಲಿ ಪ್ರತಿಕ್ರಿಯಿಸಿದ್ದಾರೆ.

<><><>

ಅಂತಾರಾಷ್ಟ್ರೀಯ ಸ್ಮಾರಕಗಳು ಮತ್ತು ತಾಣಗಳ ಜನ ಜಾಗ್ರತಿ ದಿನವನ್ನು ಆಚರಿಸಲಾಯಿತು. ಭಾರತ ಈಗ, ವಿಶ್ವ ಪರಂಪರೆಯ ಪಟ್ಟಿಯಲ್ಲಿ 43 ತಾಣಗಳನ್ನು ಮತ್ತು ಯುನೆಸ್ಕೋದ ತಾತ್ಕಾಲಿಕ ಪಟ್ಟಿಯಲ್ಲಿ, 62 ತಾಣಗಳನ್ನು ಹೊಂದಿದೆ. 1982ರಲ್ಲಿ ಅಂತಾರಾಷ್ಟ್ರೀಯ ಸ್ಮಾರಕಗಳು ಮತ್ತು ತಾಣಗಳ ಮಂಡಳಿ (ICOMOS) ಘೋಷಣೆ ಆಧರಿಸಿ, 1983ರಲ್ಲಿ UNESCO, ಈ ದಿನಾಚರಣೆಯನ್ನು ಅನುಮೋದಿಸಿದೆ.

<><><>

ಭಾರತದ ಶ್ರೀಮಂತ ಐತಿಹಾಸಿಕ ಮತ್ತು ಸಾಂಸ್ಕೃತಿಕ ತಾಣಗಳು, ಪರಂಪರೆಯ ಪ್ರಾಮುಖ್ಯತೆ, ವಾರಸುದಾರಿಕೆ ಮತ್ತು ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು, ಈ ದಿನ ಮೀಸಲಾಗಿದೆ ಎನ್ನುತ್ತಾರೆ, ಧಾರವಾಡದ ಹೆಸರಾಂತ ಇತಿಹಾಸ ತಜ್ಞ, ಪ್ರೊಫೆಸರ್ ಅಶೋಕ ಶೆಟ್ಟರ್.

<><><>

ಪ್ರೊ. ಅಶೋಕ ಶೆಟ್ಟರ್ ಧ್ವನಿ 50 ಸೆಕೆಂದುಗಳು

<><><>

ಭಗವದ್ಗೀತೆ ಮತ್ತು ಭರತ ಮುನಿಯ ನಾಟ್ಯಶಾಸ್ತ್ರವನ್ನು, ಯುನೆಸ್ಕೋದ ವಿಶ್ವ ಸ್ಮರಣೆ ದಾಖಲಾತಿಯಲ್ಲಿ ಸೇರ್ಪಡೆ ಗೊಳಿಸಲಾಗಿದೆ ಎಂದು, ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಖಾತೆ ಸಚಿವ, ಗಜೇಂದ್ರಸಿಂಗ್ ಶೇಖಾವತ್ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಅಭಿನಂದಿಸಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ಸಂಲಗ್ನತೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಧಾರವಾಡದ, ಅಖಿಲ ಭಾರತ ಗೆಡ್ಡೆ–ಗೆಣಸು ಸಂಶೋಧನಾ ಕೇಂದ್ರ, ಗೆಡ್ಡೆ–ಗೆಣಸಿನ ಹಾಗೂ ಸಿರಿಧಾನ್ಯಗಳ ಪುಡಿಯನ್ನು ಪೌಷ್ಟಿಕ ಆಹಾರವಾಗಿ, ಮಾರುಕಟ್ಟೆಗೆ ಪರಿಚಯಿಸಲು, ಸಂಶೋಧನೆ ಕೈಗೊಂಡಿದೆ. ಹಾವೇರಿ ಜಿಲ್ಲೆ, ದೇವಿಹೊಸೂರಿನ ಚೆಫ್ಟ್ ಮಹಾವಿದ್ಯಾಲಯದೊಂದಿಗೆ ಒಪ್ಪಂದವಾಗಿದ್ದು, ಸಂಶೋಧನಾ ಪ್ರಕ್ರಿಯೆ ಪೂರ್ಣಗೊಂಡ ಬಳಿಕ, ಎಲ್ಲ ಉತ್ಪನ್ನಗಳು ಮಾರುಕಟ್ಟೆಗೆ ಬರಲಿವೆ. ಕೇರಳದಲ್ಲಿ ಪ್ರಧಾನ ಕಚೇರಿ ಹೊಂದಿರುವ, ಧಾರವಾಡದ ಅಖಿಲ ಭಾರತ ಗೆಡ್ಡೆ–ಗೆಣಸು ಸಂಶೋಧನಾ ಕೇಂದ್ರ, 2014ರಲ್ಲಿ ಕಾರ್ಯಾರಂಭಿಸಿದ ಬಳಿಕ, ಗೆಡ್ಡೆ–ಗೆಣಸು ಕೃಷಿ 10 ಸಾವಿರ ಹೆಕ್ಟರ್ ಕೃಷಿ ಭೂಮಿಗೆ ವಿಸ್ತರಣೆಯಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಗೆಡ್ಡೆ–ಗೆಣಸು ಸಂಶೋಧನಾ ಕೇಂದ್ರದ ಮುಖ್ಯಸ್ಥ, ಇಮಾಮ್‌ಸಾಹೇಬ್ ಜತ್ತ.

<><><>

ಇಮಾಮ್‌ಸಾಹೇಬ್ ಜತ್ತ ಧ್ವನಿ – 50 ಸೆಕೆಂದುಗಳು

<><><>

**UG CET-25** ಕ್ಕೆ ಸಂಬಂಧಿಸಿ, ಎಲ್ಲ ನಾಲ್ಕು ವಿ ’ಯಗಳ, 16 ಆವೃತ್ತಿಗಳ ಸರಿ ಉತ್ತರಗಳನ್ನು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ – ಕೆ.ಇ.ಎ. ಜಾಲತಾಣದಲ್ಲಿ ಪ್ರಕಟಿಸಿದೆ ಎಂದು ಪ್ರಾಧಿಕಾರ ತಿಳಿಸಿದೆ. ಆಕ್ಷೇಪಣೆಗಳು ಇದ್ದಲ್ಲಿ, ಈ ತಿಂಗಳ 22 ರೊಳಗೆ, ಆನ್‌ಲೈನ್ ಮೂಲಕ ಸಲ್ಲಿಸುವಂತೆ, ಸೂಚಿಸಲಾಗಿದೆ. ಇದೇ 16 ಮತ್ತು 17 ರಂದು, ಸಿಇಟಿ ಪರೀಕ್ಷೆ ನಡೆದಿತ್ತು.

<><><>

ಇಂಡಿಯನ್ ಪ್ರೀಮಿಯರ್ ಲೀಗ್ – ಐಪಿಎಲ್ ಟಿ–20 ಸರಣಿಯ, 18ನೇ ಆವೃತ್ತಿಯ ಪಂದ್ಯದಲ್ಲಿ, ಪಂಜಾಬ್ ಕಿಂಗ್ಸ್ ತಂಡ ಐದು ವಿಕೆಟ್ ಗಳಿಂದ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಸೋಲಿಸಿ, ಜಯ ಗಳಿಸಿತು. ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜರುಗಿದ, ಮಳೆಯಿಂದ ವಿಳಂಬಗೊಂಡ ಪಂದ್ಯದಲ್ಲಿ, ಟಾಸ್ ಸೋತು, ಬ್ಯಾಟಿಂಗ್ ಮಾಡಿದ, ಆರ್.ಸಿ.ಬಿ ತಂಡ, ನಿಗದಿತ 14 ಓವರ್ ಗಳಲ್ಲಿ, 9 ವಿಕೆಟ್ ನಷ್ಟಕ್ಕೆ 95 ರನ್ ಕಲೆ ಹಾಕಿತು. ಈ ಮೊತ್ತವನ್ನು ಬೆನ್ನತ್ತಿದ್ದ ಪಂಜಾಬ್ ತಂಡ, 12 ದಶಾಂಶ 1 ಓವರುಗಳಲ್ಲಿ, 5 ವಿಕೆಟ್ ನಷ್ಟಕ್ಕೆ, 98 ರ್ ಗಳಿಸಿ, ಜಯ ಸಾಧಿಸಿತು.

<><><>

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಎಲ್.ಮುರುಗನ್, ಮುಂಬೈನಲ್ಲಿ ಆಯೋಜಿತ, ವಿಶ್ವ ದೃಶ್ಯ–ಶ್ರಾವ್ಯ ಮನೋರಂಜನಾ ಶೃಂಗಸಭೆ –ವೇವ್ಸ್ 2025ರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ

ನಡೆದ ಸಭೆಯಲ್ಲಿ, ವೇವ್ಸ್‌ನ ನಾಲ್ಕು ಪ್ರಮುಖ ಒತ್ತಾಸೆಗಳಾದ, ಪ್ರಸಾರ ಮತ್ತು ಮನೋರಂಜನೆ, ಡಿಜಿಟಲ್ ಮಾಧ್ಯಮ ಮತ್ತು ನಾವಿನ್ಯತೆ, ಚಲನಚಿತ್ರ ಮುಂತಾದ ಪರಿಕಲ್ಪನೆಗಳಡಿ ವಿವಿಧ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಆಯೋಜಿಸುವಂತೆ, ಅವರು ಸಭೆಯಲ್ಲಿ ಸೂಚಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಸಿಖ್ಖರ ಒಂಬತ್ತನೇ ಧರ್ಮ ಗುರು, ಗುರು ತೇಜ್ ಬಹದ್ದೂರ್ ಸಾಹಿಬ್ ಅವರ, 'ಪ್ರಕಾಶ್ ಪರ್ವ' ದಿನವನ್ನು, ನಾಡಿನ ಗುರುದ್ವಾರಾಗಳಲ್ಲಿ, ಶ್ರದ್ಧಾ ಭಕ್ತಿಯಿಂದ, ಸಿಖ್ ಬಾಂಧವರು ಆಚರಿಸಿದರು.

<><><>

ಅಂತಾರಾಷ್ಟ್ರೀಯ, ಹವ್ಯಾಸಿ ರೇಡಿಯೋ ಒಕ್ಕೂಟದ, ಶತಮಾನೋತ್ಸವ ಕಾರ್ಯಕ್ರಮವನ್ನು, ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್, ಬಾಲಭವನದಲ್ಲಿ, ಉದ್ಘಾಟಿಸಿದರು.

<><><>

ಬಾಬಾಸಾಹೇಬ್ ಅಂಬೇಡ್ಕರ್ ಅವರ, 134ನೇ ಜಯಂತಿ ಪ್ರಯುಕ್ತ, ಹುಬ್ಬಳ್ಳಿಯ ಲೋಕಹಿತ ಟ್ರಸ್ಟ್ ಹಾಗೂ ಸಾಮರಸ್ಯ ವೇದಿಕೆ ಮತ್ತು ಸದ್ಭಾವ ವೇದಿಕೆಯ ಸಹಯೋಗದಲ್ಲಿ, ಕೇಶವ ಕುಂಜದ ಆವರಣದಲ್ಲಿ, ಇಂದು ಸಂಜೆ 6 ಗಂಟೆಗೆ, ಸಾರ್ವಜನಿಕ ಸಮಾರಂಭ ಜರುಗಲಿದೆ.

<><><>

ಶಿವಮೊಗ್ಗದ ಅಜೇಯ ಸಂಸ್ಕೃತಿ ಬಳಗ, ಇಂದು ಸಂಜೆ 6.30ಕ್ಕೆ ಕುವೆಂಪು ರಂಗಮಂದಿರದಲ್ಲಿ, ಸಮಕಾಲೀನ ಸಮಸ್ಯೆ ವಿಶ್ಲೇಷಿಸುವ, 'ನಾಯಿ ಕಳೆದಿದೆ' ನಾಟಕ ಏರ್ಪಡಿಸಿದೆ.

<><><>

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಜೈನ ಅಧ್ಯಯನ ಪೀಠದ ಸಂಯೋಜಕರಾಗಿ, ಡಾಕ್ಟರ್ ಜಿನದತ್ತ ಹಡಗಲಿ ನಿಯುಕ್ತರಾಗಿದ್ದಾರೆ.

<><><>

ಗದಗ ಜಿಲ್ಲೆ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ, ಮುಳಗುಂದದ ಎಸ್.ಜೆ.,ಜೆ.ಎಂ. ಪ್ರೌಢ ಶಾಲೆ ಆವರಣದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, ಜನತಾ ದರ್ಶನ ಜರುಗಲಿದೆ.

<><><>

ವಿಜಯನಗರ ಜಿಲ್ಲೆ, ಕೂಡ್ಲಿಗಿ ತಾಲೂಕು, ಹೊಸಹಳ್ಳಿ ಹೋಬಳಿಯಲ್ಲಿ, ಇಂದು ತಾಲೂಕು ಮಟ್ಟದ, ಜನತಾ ದರ್ಶನ ಕಾರ್ಯಕ್ರಮ, ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಅಧ್ಯಕ್ಷತೆಯಲ್ಲಿ, ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ವಿದ್ಯಾಸಿರಿ ಯೋಜನೆ’; ಅಲ್ಪ ಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗೆ, ಮಾಸಿಕ ಎರಡು ಸಾವಿರ ರೂಪಾಯಿ, ಶಿಷ್ಯ ವೇತನ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ ಅನುಷ್ಠಾನ; ಕರ್ನಾಟಕಕ್ಕೆ ಅಗ್ರ ಸ್ಥಾನ – ಎನ್.ಚಲುವರಾಯ ಸ್ವಾಮಿ.
- ವಿಶ್ವ ಪರಂಪರೆ ದಿನ; ಅಂತಾರಾಷ್ಟ್ರೀಯ ಸ್ಮಾರಕಗಳು ಮತ್ತು ಪರಿಸರ ತಾಣಗಳ, ಜನ ಜಾಗ್ರತಿ ದಿನಾಚರಣೆ.
- ಧಾರವಾಡದ, ಗೆಡ್ಡೆ–ಗೆಣಸು ಸಂಶೋಧನಾ ಕೇಂದ್ರದಿಂದ, ಮೌಲ್ಯವರ್ಧಿತ ಪೌಷ್ಟಿಕ ಆಹಾರ, ಶೀಘ್ರ ಮಾರುಕಟ್ಟೆಗೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.